# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಹಾಯಕ ನಿರ್ದೇಶಕರು ನಗರ ಯೋಜನೆ, ಮಹದೇವಪುರ ವಲಯ, ಬೆಂಗಳೂರು.

ಸಂಖ್ಯೆ: ಬಿಬಿಎಂಪಿ/ನಯೋ/ಮವ/512 /2019-20

ದಿನಾಂಕ: 10/03/2020.

## 'ಪ್ರಾರಂಭಿಕ ಪ್ರಮಾಣ ಪತ್ರ'

**ವಿಷಯ:-** ಸಂಖ್ಯೆ: Ad.Com/MDP/0512/19-20 ದಿ:08/11/2019 ರಂದು ನಕ್ಷೆ ಪರವಾನಿಗೆ ಪಡೆದಿರುವ ವಸತಿ ಸಮುಚ್ಚಯ ಕಟ್ಟಡ ನಿರ್ಮಾಣವನ್ನು ಕೈಗೊಳ್ಳಲು ಪ್ರಾರಂಭಿಕ ಪ್ರಮಾಣ ಪತ್ರ ನೀಡುವ ಬಗ್ಗೆ.

**ಉಲ್ಲೇಖ:-** 1) ತಮ್ಮ ಮನವಿ ಪತ್ರದ ದಿನಾಂಕ:02/03/2020.

*****

ಬೆಂಗಳೂರು ಪೂರ್ವ ತಾಲ್ಲೂಕು, ಕೆ.ಆರ್.ಪುರ ಹೋಬಳಿ, ಶೀಗೆಹಳ್ಳಿ ಗ್ರಾಮದ ಖಾತಾ ಸಂಖ್ಯೆ.611/35/7/203 ರ ಆಸ್ತಿಯನ್ನು ದಿನಾಂಕ:05/03/2020. ರಂದು ಸಹಾಯಕ ನಿರ್ದೇಶಕರು, ನಗರ ಯೋಜನೆ ಮಹದೇವಪುರ ವಲಯ ರವರು ಸಹಾಯಕ ಅಭಿಯಂತರರೊಡನೆ ಪರಿವೀಕ್ಷಣೆ ಮಾಡಲಾಗಿ ಸ್ಟಿಲ್ಟ್ ಅಂತಸ್ತಿನಲ್ಲಿ ನಿರ್ಮಿಸಿರುವ ಸ್ತಂಭಗಳನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ ಎಲ್.ಪಿ. ಸಂಖ್ಯೆ: Ad.Com/MDP/0512/19-20 ದಿ:08/11/2019 ರಂದು ಮಂಜೂರಾಗಿರುವ ನಕ್ಷೆಗೆ ಹೋಲಿಕೆ ಮಾಡಲಾಗಿ ಈ ನಡುಭಾಗಗಳು ಮಂಜೂರಾತಿ ನೀಡಿರುವ ನಕ್ಷೆಯಂತೆ ಬೈಲಾ ಪ್ರಕಾರ ಇರುವುದು ಕಂಡುಬಂದಿದೆ. ಪ್ರಾರಂಭಿಕ ಪ್ರಮಾಣ ಪತ್ರ ಪಡೆಯಲು ಪಾವತಿಸಬೇಕಾದ ಶುಲ್ಕ ರೂ.82,000/- ಗಳನ್ನು ಪಾವತಿಸಲು ತಿಳಿಸಿದ್ದು, ತಾವು ರೂ.82,000/- ಡಿ.ಡಿ.ಸಂಖ್ಯೆ:025832, ದಿನಾಂಕ: 09/03/2020, ರಲ್ಲಿ ಪಡೆದಿರುವ ಡಿ.ಡಿ.ಗಳನ್ನು ದಿನಾಂಕ:10/03/2020 ರಲ್ಲಿ ಈ ಕಛೇರಿಗೆ ಸಲ್ಲಿಸಿರುತ್ತೀರಿ, ಸದರಿ ಮೊತ್ತವನ್ನು ದಿನಾಂಕ:10/03/2020 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಬೊಕ್ಕಸಕ್ಕೆ ಪಾವತಿಸಲಾಗಿದೆ.

ಆದ್ದರಿಂದ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಕಾಮಗಾರಿಯನ್ನು ಮುಂದುವರಿಸಲು ಈ ಮೂಲಕ ಅನುಮೋದನೆ ನೀಡಲಾಗಿದೆ.

1) ಯಾವುದೇ ಬದಲಾವಣೆಗಳನ್ನಾಗಲೀ, ಮಾರ್ಪಾಡುಗಳನ್ನಾಗಲೀ ಅಥವಾ ಉಲ್ಲಂಘನೆಗಳನ್ನಾಗಲೀ ಮಾಡದೆ ಕಟ್ಟುನಿಟ್ಟಾಗಿ ಮಂಜೂರಾತಿ ನೀಡಿರುವ ನಕ್ಷೆಯ ಮತ್ತು ಕಟ್ಟಡ ಉಪವಿಧಿಗಳ ಪ್ರಕಾರವೇ ಕಾಮಗಾರಿಯನ್ನು ಕೈಗೊಳ್ಳತಕ್ಕದ್ದು.
2) ಕಾಮಗಾರಿಯು, ಅಡಿಪಾಯದ ಅಥವಾ ಸ್ತಂಭಗಳ ಆಧಾರ ಅಥವಾ ಸ್ತಂಭಗಳ ಸ್ಥಿರೀಕರಣ ಕಾರ್ಯವು ಪೂರ್ಣಗೊಂಡ ಹಂತವನ್ನು ತಲುಪಿದಾಗ ನಿರ್ಮಾಣವನ್ನು ಮಂಜೂರಾತಿ ನೀಡಿರುವ ನಕ್ಷೆಯ ಮತ್ತು ಕಟ್ಟಡ ಉಪವಿಧಿಗಳ ಪ್ರಕಾರ ಕೈಗೊಂಡಿರುವ ಬಗ್ಗೆ ಕಾಮಗಾರಿಯನ್ನು ಪರಿವೀಕ್ಷಣೆ ಮತ್ತು ಶೋಧನೆ ಮಾಡಲು ನೆರವು ನೀಡುವ ದೃಷ್ಟಿಯಿಂದ ಮಹಾನಗರ ಪಾಲಿಕೆಗೆ ಸಂದೇಶವನ್ನು ಕಳುಹಿಸತಕ್ಕದ್ದು ಹಾಗೂ ಕಟ್ಟಡ ಪೂರ್ಣಗೊಂಡ ನಂತರ ಸ್ವಾಧೀನಾನುಭವ ಪತ್ರವನ್ನು ಪಡೆಯಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಸಂದೇಶವನ್ನು ಕಳುಹಿಸತಕ್ಕದ್ದು ಹಾಗೂ ಸ್ವಾಧೀನಾನುಭವ ಪತ್ರವನ್ನು ಪಡೆಯುವುದು.
3) ಕಾಲಕಾಲಕ್ಕೆ ಸಂದರ್ಭಾನುಸಾರ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ನೀಡುವ ಸೂಚನೆಗಳನ್ನು ಪಾಲಿಸತಕ್ಕದ್ದು ಹಾಗೂ ಮಂಜೂರಾತಿ ಸಮಯದಲ್ಲಿ ನೀಡಿರುವ ಷರತ್ತುಗಳಿಗೆ ಬದ್ಧರಾಗಿರತಕ್ಕದ್ದು.

ಸಹಾಯಕ ನಿರ್ದೇಶಕರು ನಗರ ಯೋಜನೆ
ಬೃ.ಬೆಂ.ಮ.ಪಾ., ಮಹದೇವಪುರ
ಬೆಂಗಳೂರು-48

ರವರಿಗೆ,

M/s Vikhath Infra,
Rep by Smt Rekha Vulava,
And Sri Nallabathu Dhamodhar,
Khatha No.611/35/7/203,
Seegehalli Village,
Bangalore.

ಪ್ರತಿಯನ್ನು:-

ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿಬಿಎಂಪಿ, ಕೆ.ಆರ್.ಪುರ ಉಪ ವಿಭಾಗ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ

Scanned with CamScanner